ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಸಿಬ್ಬಂದಿ-1/ವೈವೆಮಪಾ/92/2011-12

ಆಯುಕ್ತರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು-12.
ದಿನಾಂಕ: 13-06-2012

## ಸುತ್ತೋಲೆ

ವಿಷಯ:- ಪದವಿ ಪೂರ್ವ ಶಿಕ್ಷಣ ಇಲಾಖೆಯ ನೌಕರರ ವೈದ್ಯಕೀಯ ವೆಚ್ಚ ಮರು ಪಾವತಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:-
1. ಕರ್ನಾಟಕ ಸರ್ಕಾರಿ ನೌಕರರ (ಮೆಡಿಕಲ್ ಅಟೆಂಡೆನ್ಸ್) ನಿಯಮ 1963.
2. ಈ ಕಛೇರಿಯ ನಡವಳಿ ಸಂಖ್ಯೆ ಪಪೂಶಿಇ/ಎಂಎಂ/ವೈವೆಚ್ಚ/ಮ.ಪಾವತಿ/2000-01 ದಿನಾಂಕ 01-07-2000
3. ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 2 ಎಸ್ಎಂಆರ್ 2008 ದಿನಾಂಕ 24-10-2009.
4. ಆಯುಕ್ತಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇದರ ಸುತ್ತೋಲೆ ಸಂಖ್ಯೆ ಎಂಡಿಎ/ಸನಿ(ವೈ)41/09-10 ದಿನಾಂಕ 17/23-03-2010.
5. ಸರ್ಕಾರದ ಸುತ್ತೋಲೆ ಸಂಖ್ಯೆ ಎಫ್‌ಡಿ 11 ಬಿಪಿಇ 2010 ದಿನಾಂಕ 06-07-2010.
6. ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇದರ ಸುತ್ತೋಲೆ ಸಂಖ್ಯೆ: ಆ(1)/ವೈಪ-01/2010-11 ದಿನಾಂಕ 25-08-2011.
7. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 34 ಎಸ್ಎಂಆರ್ 2011 ದಿನಾಂಕ 28-09-2011.
8. ಸರ್ಕಾರದ ಪತ್ರ ಸಂಖ್ಯೆ ಇಡಿ 360 ಡಿಜಿಡಿ 2011 ದಿನಾಂಕ 23-05-2012.

---

1) ರಾಜ್ಯ ಸರ್ಕಾರಿ ನೌಕರರು ತಮ್ಮ ಹಾಗು ತಮ್ಮ ಕುಟುಂಬ (ಫ್ಯಾಮಿಲಿ) ಸದಸ್ಯರ ವೈದ್ಯಕೀಯ ಚಿಕಿತ್ಸೆಗೆ ವೆಚ್ಚ ಮಾಡಿದ ಹಣವನ್ನು ಮರು ಪಾವತಿ ಪಡೆಯಲು ಸರ್ಕಾರವು ಉಲ್ಲೇಖ-1ರ ನಿಯಮಗಳಲ್ಲಿ ಅವಕಾಶ ಕಲ್ಪಿಸಿದೆ.

2) ಪದವಿ ಪೂರ್ವ ಶಿಕ್ಷಣ ಇಲಾಖೆಯ ನೌಕರರಿಗೆ ಸಂಬಂಧಿಸಿದ ವೈದ್ಯಕೀಯ ವೆಚ್ಚದ ಮೊತ್ತ ರೂ.10,000/- ಅಥವಾ ಅದಕ್ಕಿಂತ ಕಡಿಮೆ ಇದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಮರು ಪಾವತಿಗೆ ಮಂಜೂರಾತಿ ನೀಡುವ ಅಧಿಕಾರವನ್ನು ಉಲ್ಲೇಖ-2ರ ನಡವಳಿಯ ಮೂಲಕ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಿಗೆ ನೀಡಲಾಗಿತ್ತು. ಉಳಿದಂತೆ ರೂ.10,000/- ಕ್ಕಿಂತ ಹೆಚ್ಚಿನ ಮೊತ್ತದ ಪ್ರಕರಣಗಳನ್ನು ಈ ಕಛೇರಿಯಿಂದ ನಿರ್ವಹಿಸಲಾಗುತ್ತಿತ್ತು.

3) ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಲ್ಪಡುವ ವೈದ್ಯಕೀಯ ವೆಚ್ಚ ಮರು ಪಾವತಿ ಪ್ರಸ್ತಾವನೆಗಳನ್ನು ನಿರ್ದೇಶನಾಲಯವು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯ ಶಾಲೆಗಳ ಮುಖ್ಯ ವೈದ್ಯಕೀಯ ಪರಿವೀಕ್ಷಣಾಧಿಕಾರಿಯವರ ಅಭಿಪ್ರಾಯಕ್ಕೆ ಕಳುಹಿಸಿ ಅವರು ನಿರ್ಧರಿಸುವ ಮೊತ್ತವನ್ನು ಮರು ಪಾವತಿಗೆ ಮಂಜೂರಾತಿಗೆ ನೀಡುವ ಪದ್ಧತಿಯನ್ನು ರೂಢಿಸಿಕೊಳ್ಳಲಾಗಿತ್ತು.

4) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಉಲ್ಲೇಖ-6ರ ಸುತ್ತೋಲೆಯ ಮೂಲಕ ಆಯುಕ್ತರ ಕಛೇರಿಯ ಶಾಲೆಗಳ ಮುಖ್ಯ ವೈದ್ಯಕೀಯ ಪರಿವೀಕ್ಷಕರು ನೀಡುತ್ತಿದ್ದ ಅಭಿಪ್ರಾಯದ ಕೆಲಸವನ್ನು ವಿಕೇಂದ್ರೀಕರಿಸುವುದರಿಂದ, ಆಯಾ ಇಲಾಖೆ / ಕಛೇರಿ ಹಂತದಲ್ಲಿಯೇ ವೈದ್ಯಕೀಯ ವೆಚ್ಚ ಮರು ಪಾವತಿ ಬಿಲ್ಲುಗಳನ್ನು ಪರಿಶೀಲಿಸಿ ಅವರೇ ಮರು ಪಾವತಿ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿರುತ್ತಾರೆ. ಹಾಗು, ಈ ನಿರ್ದೇಶನಾಲಯದಿಂದ ಶಾಲೆಗಳ ಮುಖ್ಯ ವೈದ್ಯಕೀಯ ಪರಿವೀಕ್ಷಣಾಧಿಕಾರಿಗಳ ಅಭಿಪ್ರಾಯ ಕೋರಿ ಸಲ್ಲಿಸಿದ್ದ ಎಲ್ಲಾ ಪ್ರಸ್ತಾವನೆಗಳನ್ನು ಹಿಂದಿರುಗಿಸಿರುತ್ತಾರೆ.

5) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯವು ಸಹ ಉಲ್ಲೇಖ-4ರ ಸುತ್ತೋಲೆಯಲ್ಲಿ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರು ಪಾವತಿ ಬಗ್ಗೆ ಕೆಎಂಎ ನಿಯಮ 1963, ನಿಯಮ 3(ಬಿ)ರ ಪ್ರಕಾರ ಸಂಬಂಧಿಸಿದ ಇಲಾಖೆಯ ಹಂತದಲ್ಲಿಯೇ ಪರಿಶೀಲಿಸಿ ಅವರೇ ಮರು ಪಾವತಿಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಹಾಗು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯಕ್ಕೆ ಪರಿಶೀಲನೆಗೆ ಕಳುಹಿಸತಕ್ಕದ್ದಲ್ಲ ಎಂದು ತಿಳಿಸಿರುತ್ತಾರೆ.

6) Karnataka Government Servants (Medical Attendance) Rules 1963ರ ನಿಯಮ 3 (ಬಿ) (ii) ಹಾಗೂ 3 ಬಿ (iii) ರನ್ವಯ ಇಲಾಖಾ ಮುಖ್ಯಸ್ಥರು ಹಾಗು ಪ್ರವಾಸ ಭತ್ಯ ಬಿಲ್ಲುಗಳನ್ನು ಮೇಲು ಸಹಿ ಮಾಡುವ ಅಧಿಕಾರಿಯು ಸಂಬಂಧಿಸಿದ ಇಲಾಖೆಯ ಸರ್ಕಾರಿ ನೌಕರರ ವೈದ್ಯಕೀಯ ವೆಚ್ಚದ ಮರು ಪಾವತಿ ಕ್ಲೇಮ್ ಇತ್ಯರ್ಥಪಡಿಸುವ ನಿಯಂತ್ರಣಾಧಿಕಾರಿಗಳಾಗಿರುತ್ತಾರೆ (ಕಂಟ್ರೋಲಿಂಗ್ ಆಫೀಸರ್). ಈ ಕಛೇರಿಯ ಪತ್ರ ಸಂಖ್ಯೆ ಸಿ2/ ಅಪ್ರ1/97-98 ದಿನಾಂಕ 26-11-1997 ರಲ್ಲಿ ಜಿಲ್ಲಾ ಉಪ ನಿರ್ದೇಶಕರಿಗೆ ಅವರ ವ್ಯಾಪ್ತಿಗೊಳಪಡುವ ಪ್ರಿನ್ಸಿಪಾಲರ / ಉಪನ್ಯಾಸಕರ / ನೌಕರರ ಪ್ರವಾಸ ಭತ್ಯೆ ಬಿಲ್ಲುಗಳನ್ನು ಮೇಲು ಸಹಿ ಮಾಡುವ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ಸದರಿ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

7) ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಇನ್ನು ಮುಂದೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ನೌಕರರ ವೈದ್ಯಕೀಯ ವೆಚ್ಚದ ಮರು ಪಾವತಿ ಪ್ರಕರಣಗಳನ್ನು ಇಲಾಖೆಯ ಸಂಬಂಧಿಸಿದ "ಕಂಟ್ರೋಲಿಂಗ್ ಆಫೀಸರ್" (Controlling Officer) ಹಂತದಲ್ಲಿಯೇ ಇತ್ಯರ್ಥಪಡಿಸುವುದು ಸೂಕ್ತವೆಂದು ಭಾವಿಸಿ ಈ ಕೆಳಗಿನಂತೆ ಆದೇಶಿಸಿದೆ:

ಅ) ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಯಾ ಜಿಲ್ಲಾ ಉಪ ನಿರ್ದೇಶಕರು (Controlling Officer) ಅವರ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಮತ್ತು ಉಪ ನಿರ್ದೇಶಕರ ಕಛೇರಿಯ ಎಲ್ಲಾ ನೌಕರರ (ಪ್ರಿನ್ಸಿಪಾಲರು, ಉಪನ್ಯಾಸಕರು, ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ನೌಕರರು) ವೈದ್ಯಕೀಯ ವೆಚ್ಚ ಮರು ಪಾವತಿಗೆ ಮಂಜೂರಾತಿ ನೀಡುವುದು.

ಆ) ಜಿಲ್ಲಾ ಉಪ ನಿರ್ದೇಶಕರ ವೈದ್ಯಕೀಯ ವೆಚ್ಚ ಮರು ಪಾವತಿ ಬಿಲ್ಲುಗಳು ಮತ್ತು ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ನೌಕರರ ವೈದ್ಯಕೀಯ ವೆಚ್ಚ ಮರು ಪಾವತಿಗೆ ಆಯುಕ್ತರು / ನಿರ್ದೇಶಕರು ಮಂಜೂರಾತಿ ನೀಡುವುದು.

8) ವೈದ್ಯಕೀಯ ವೆಚ್ಚ ಮರು ಪಾವತಿ ಸಂಬಂಧ ಈ ಕೆಳಕಂಡ ಕೆಲವು ಮಾರ್ಗಸೂಚಿಗಳನ್ನು ನೀಡಲಾಗಿದೆ. ವೈದ್ಯಕೀಯ ವೆಚ್ಚ ಮರು ಪಾವತಿ ಕ್ಲೇಮ್‌ಗಳನ್ನು ಕೆಎಂಎ ನಿಯಮಗಳು 1963ರ ಅಡಿಯಲ್ಲಿ ಕೆಳಕಂಡ ಮಾರ್ಗಸೂಚಿಗಳನ್ವಯ ಪರಿಶೀಲಿಸಿ ಕ್ರಮ ಜರುಗಿಸುವುದು.

9) ಕೆಎಂಎ ನಿಯಮಗಳು, 1963 ರನ್ವಯ ನಿಗದಿಪಡಿಸಿರುವ ಸರ್ಕಾರಿ ಆಸ್ಪತ್ರೆಗಳು ಹಾಗೂ ನಿಯಮ 8 ರನ್ವಯ ಸದರಿ ನಿಯಮದ ಶೆಡ್ಯೂಲ್-I ಮತ್ತು ಶೆಡ್ಯೂಲ್-II ರಲ್ಲಿ ನಿಗದಿಪಡಿಸಿರುವ ಹಾಗೂ ಮುಂದೆ ನಿಗದಿಪಡಿಸುವ ಅಧಿಸೂಚಿತ ಮಾನ್ಯತೆ ಪಡೆದ ಸರ್ಕಾರಿ ಆಸ್ಪತ್ರೆಗಳು, ಆಯುರ್ವೇದ ಆಸ್ಪತ್ರೆಗಳು, ನ್ಯಾಚುರೋಪತಿ ಆಸ್ಪತ್ರೆಗಳು ಮತ್ತು Diagnostic ಕೇಂದ್ರಗಳಲ್ಲಿ ಪಡೆದ ಚಿಕಿತ್ಸೆಗಳಿಗೆ ಭರಿಸಿದ ವೆಚ್ಚವನ್ನು ಮರು ಪಾವತಿ ಪಡೆಯಲು ರಾಜ್ಯ ಸರ್ಕಾರಿ ನೌಕರರಿಗೆ ಅವಕಾಶವಿದೆ.

(ಅ) ಶೆಡ್ಯೂಲ್-I ಮತ್ತು ಶೆಡ್ಯೂಲ್-II ರಲ್ಲಿ ದಿನಾಂಕ 12-10-2011ರ ವರೆಗೆ ನಿಗದಿಪಡಿಸಿರುವ ಖಾಸಗಿ ಆಸ್ಪತ್ರೆಗಳ / Diagnostic Centers (ರೋಗ ನಿರ್ಣಯದ ಕೇಂದ್ರಗಳು) ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

(ಆ) ಸರ್ಕಾರವು ವೈದ್ಯಕೀಯ ವೆಚ್ಚದ ಮರು ಪಾವತಿಗೆ ಅಧಿಸೂಚಿಸದೆ ಇರುವ / ಮಾನ್ಯತೆ ಪಡೆಯದಿರುವ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಗೆ ವೆಚ್ಚ ಮಾಡಿರುವ ಹಣವನ್ನು ಮರು ಪಾವತಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

10) ಕೆಎಂಎ ನಿಯಮ 6(1) ಮತ್ತು (2) ರಲ್ಲಿ **ಸೂಚಿಸಿರುವುದನ್ನು ಹೊರತುಪಡಿಸಿ,** ಸಾಮಾನ್ಯ ಸಂದರ್ಭಗಳಲ್ಲಿ ಹೊರ ರಾಜ್ಯಗಳ ಆಸ್ಪತ್ರೆಗಳಲ್ಲಿ ಅಥವಾ ರಾಜ್ಯದಲ್ಲಿ ಸರ್ಕಾರದಿಂದ ಅಧಿಸೂಚಿತಗೊಂಡಿಲ್ಲದಂತಹ ಖಾಸಗಿ ಆಸ್ಪತ್ರೆಗಳಲ್ಲಿ Diagnostic Centers (ರೋಗ

...ಗಳಲ್ಲಿ ಪಡೆದ ಚಿಕಿತ್ಸಾ ವೆಚ್ಚವನ್ನು ಮರು ಪಾವತಿಸಲು ಕೆಎಂಎ ನಿಯಮ 8 ರನ್ವಯ ಅವಕಾಶವಿರುವುದಿಲ್ಲ.

(ಅ) ಆದಾಗ್ಯೂ ತುರ್ತು ಅನಿವಾರ್ಯ ಸಂದರ್ಭಗಳಲ್ಲಿ ಹೊರ ರಾಜ್ಯಗಳಲ್ಲಿ ಅಥವಾ ರಾಜ್ಯದ ಮಾನ್ಯತೆ ಪಡೆಯದ ಶೆಡ್ಯೂಲ್- I ಮತ್ತು ಶೆಡ್ಯೂಲ್- II ರಲ್ಲಿ ಅಧಿಸೂಚಿಸದೇ ಇರುವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಲ್ಲಿ, ಸದರಿ ಚಿಕಿತ್ಸೆಯು ತುರ್ತಾಗಿ ಅತ್ಯವಶ್ಯಕವಾಗಿತ್ತೆಂದು ಮನಗಂಡಲ್ಲಿ ಹಾಗೂ ಈ ಸಂಬಂಧ ಸಂಬಂಧಿಸಿದ ವೈದ್ಯಾಧಿಕಾರಿಯು ಸೂಕ್ತ ಕಾರಣಗಳನ್ನು ನೀಡಿ ದೃಢೀಕರಿಸಿದ್ದಲ್ಲಿ, ಅಂತಹ ಚಿಕಿತ್ಸಾ ವೆಚ್ಚದ ಮರು ಪಾವತಿಗೆ ಕೆಎಂಎ ನಿಯಮ 31ರ ಅಡಿಯಲ್ಲಿ ಪ್ರಸ್ತಾವನೆಯನ್ನು ಸೂಕ್ತ ದಾಖಲೆಗಳೊಂದಿಗೆ ಮುಂದಿನ ಕ್ರಮಕ್ಕಾಗಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

11) ಕೆಎಂಎ ನಿಯಮ 2(1) (i) (ii) ಮತ್ತು (iii) ರಲ್ಲಿ ನಿಗದಿಪಡಿಸಿರುವಂತೆ ಸರ್ಕಾರಿ ನೌಕರರು ಮತ್ತು ಅವರ ಕುಟುಂಬ ಸದಸ್ಯರು ಮಾತ್ರ ವೈದ್ಯಕೀಯ ವೆಚ್ಚ ಮರು ಪಾವತಿಗೆ ಅರ್ಹರಿರುತ್ತಾರೆ.

(ಅ) ಸರ್ಕಾರಿ ನೌಕರರ ತಂದೆ ಅಥವಾ ತಾಯಿಯ ವೈದ್ಯಕೀಯ ವೆಚ್ಚದ ಮರು ಪಾವತಿಗೆ ಸಂಬಂಧಪಟ್ಟಿದ್ದರೆ, ಅವರ ಮಾಸಿಕ ಆದಾಯ ರೂ.~~4,000/-~~ 6000 ಕ್ಕಿಂತ ಹೆಚ್ಚಾಗಿದಲ್ಲಿ ಅವರ ವೈದ್ಯಕೀಯ ವೆಚ್ಚದ ಮರು ಪಾವತಿಗೆ ಅವಕಾಶವಿರುವುದಿಲ್ಲ.

12) ಸರ್ಕಾರಿ ನೌಕರರು ತಮಗೆ ಅಥವಾ ತಮ್ಮ ಕುಟುಂಬ ಸದಸ್ಯರ ವೈದ್ಯಕೀಯ ಚಿಕಿತ್ಸೆಗೆ ವೆಚ್ಚ ಮಾಡಿದ ಹಣವನ್ನು ಮರು ಪಾವತಿ ಪಡೆಯಲು ಕೆಎಂಎ ನಿಯಮಗಳ ಅಡಿ ನಿಗದಿಪಡಿಸಿರುವ ಅರ್ಜಿ ನಮೂನೆಗಳಲ್ಲಿ ಸದರಿ ನಿಯಮಗಳ ಅಡಿ ನಿಗದಿಪಡಿಸಿರುವ ಸಂಬಂಧಿಸಿದ ಆಸ್ಪತ್ರೆಗಳ ವೈದ್ಯಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಬಿಲ್ಲುಗಳನ್ನು (ದ್ವಿಪ್ರತಿಯಲ್ಲಿ) ಕಛೇರಿಯ ಮುಖ್ಯಸ್ಥರ ಮೂಲಕ, ಅವರ ನಿಯಂತ್ರಣಾಧಿಕಾರಿಯವರಿಗೆ (Controlling Officer) ಸಲ್ಲಿಸುವುದು.

13) ಕೆಎಂಎ ನಿಯಮ 15(3) ರನ್ವಯ ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 146-Aರ ಪ್ರಕಾರ ವೈದ್ಯಕೀಯ ಚಿಕಿತ್ಸೆ ಪಡೆದ ಅಂತಿಮ ದಿನಾಂಕದ 03 (ಮೂರು) ತಿಂಗಳೊಳಗೆ ಅಂತಹ ಚಿಕಿತ್ಸೆಗೆ ಸಂಬಂಧಿಸಿದ ಮರು ಪಾವತಿ ಬಿಲ್ಲುಗಳನ್ನು ನಿಯಂತ್ರಣಾಧಿಕಾರಿಯವರಿಗೆ (Controlling Officer) ಸಲ್ಲಿಸುವುದು. ಮೂರು ತಿಂಗಳೊಳಗೆ ಸಲ್ಲಿಸುವ ಬಿಲ್ಲುಗಳನ್ನು ಮಾತ್ರ ಪರಿಗಣಿಸಿ ಮರು ಪಾವತಿಗ ಮಂಜೂರಾತಿ ನೀಡಲು ನಿಯಂತ್ರಣಾಧಿಕಾರಿಯವರಿಗೆ (Controlling Officer) ಅಧಿಕಾರವಿದೆ. ಮೂರು ತಿಂಗಳ ನಂತರ ಸಲ್ಲಿಸಲ್ಪಟ್ಟ ಬಿಲ್ಲುಗಳ ಮರು ಪಾವತಿಗೆ ಮಂಜೂರಾತಿ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. 6 ತಿಂಗಳು

14) ಒಳರೋಗಿಯಾಗಿ ಅಥವಾ ಹೊರ ರೋಗಿಯಾಗಿ ಪಡೆದ ಚಿಕಿತ್ಸೆಗಳು, ಪರೀಕ್ಷೆಗಳು, ಕ್ಷ-ಕಿರಣ, ಸ್ಕ್ಯಾನಿಂಗ್, ವೈದ್ಯಾಧಿಕಾರಿಗಳ ಸಮಾಲೋಚನೆ (ಡಾಕ್ಟರ್ ಕನ್ಸಲ್ಟೇಷನ್), ರೋಗ ಪತ್ತೆ ವಿಧಾನಗಳು ಮುಂತಾದ ಚಿಕಿತ್ಸಾ ವಿಧಾನಗಳಿಗೆ ಆಯಾ ಆಸ್ಪತ್ರೆಗಳು, ...

ಮತ್ತು Diagnostic Centers (ರೋಗ ನಿರ್ಣಯದ ಕೇಂದ್ರಗಳು) ವಿವಿಧ ದರಗಳಲ್ಲಿ ರೋಗಿಗಳಿಂದ ಹಣ ಪಡೆದ್ದಿರೂ ಸಹ ವೈದ್ಯಕೀಯ ವೆಚ್ಚ ಮರು ಪಾವತಿಗೆ ಮಂಜೂರಾತಿ ನೀಡುವಾಗ ಅಂತಹ ಪ್ರತಿಯೊಂದು ಚಿಕಿತ್ಸಾ ವಿಧಾನಗಳಿಗೆ ಸರ್ಕಾರವು ಇತ್ತೀಚಿನ ಆದೇಶಗಳಲ್ಲಿ ನಿಗದಿಪಡಿಸಿರುವ / Central Government Health Scheme (CGHS) ಅಡಿಯಲ್ಲಿ ಕಾಲಕಾಲಕ್ಕೆ ವಿವಿಧ ರೋಗ ನಿರ್ಣಯ ವಿಧಾನಗಳಿಗೆ ಮತ್ತು ಚಿಕಿತ್ಸೆಗಳಿಗೆ ನಿಗದಿಪಡಿಸಿರುವ ದರಗಳಂತೆ ಮಾತ್ರ ಮರು ಪಾವತಿಗೆ ಮಂಜೂರಾತಿ ನೀಡುವುದು.

(ಅ) ಕೆಎಂಎ ನಿಯಮ 14 (2) (a) ರಂತೆ ಟಾನಿಕ್‌ಗಳು, ವಿಟಮಿನ್‌ಗಳು (ವಿಟಮಿನ್ ಚುಚ್ಚುಮದ್ದು, ಟಾನಿಕ್, ಮಾತ್ರೆಗಳು), ಆಹಾರ, ಸೋಂಕು ಪ್ರತಿಬಂಧಕಗಳು, ಟಾಯ್ಲೆಟ್ ಪ್ರಿಪರೇಷನ್, ಇಂಜೆಕ್ಷನ್ ನೀಡಲ್‌ಗಳು, ಸಿರಂಜ್‌ಗಳು, ಹತ್ತಿ, ಬ್ಯಾಂಡೇಜ್ ಮುಂತಾದವುಗಳು ಔಷದಿಗಳಲ್ಲದಿರುವುದರಿಂದ, ಇವುಗಳಿಗೆ ವೆಚ್ಚ ಮಾಡಿರುವ ಹಣವನ್ನು ಮರು ಪಾವತಿ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

(ಆ) ಕೆಎಂಎ ನಿಯಮ 14 (2) (b) ರನ್ವಯ The Director General of Health Service, Government of India, ಇವರು ಕಾಲಕಾಲಕ್ಕೆ ಪ್ರಕಟಿಸುವ / ಹೊರಡಿಸುವ ಮರು ಪಾವತಿಗೆ ಅರ್ಹವಲ್ಲದ ವಸ್ತುಗಳ ಪಟ್ಟಿಯನ್ನು ಗಮನಿಸಿ ಅದರಂತೆ ಕ್ರಮವಹಿಸುವುದು.

15) ಕೆಎಂಎ ನಿಯಮ 3 (e) ರಲ್ಲಿ ಪ್ಯಾಕೇಜ್ ದರಗಳನ್ನು (Package Rate) ಜಾರಿಗೆ ತಂದಿದ್ದು, ಸರ್ಕಾರವು ಆಯಾ ಚಿಕಿತ್ಸೆಗೆ ನಿಗದಿಪಡಿಸಿರುವ ಪ್ಯಾಕೇಜ್ ದರಗಳನ್ನು ಮಾತ್ರ ಮರು ಪಾವತಿಸಲು ಮಂಜೂರಾತಿ ನೀಡುವುದು. ಈ ಪ್ಯಾಕೇಜ್ ದರದ ಬಗ್ಗೆ ಉಲ್ಲೇಖ-3ರ ಅಧಿಸೂಚನೆಯಲ್ಲಿ ವಿಷದಪಡಿಸಲಾಗಿದೆ. ಉಲ್ಲೇಖ-3ರ ಅಧಿಸೂಚನೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

(ಅ) ಕೆಎಂಎಂ ನಿಯಮ 14 (3) ರಂತೆ, ಪ್ಯಾಕೇಜ್ ದರಗಳನ್ನು ಪರಿಗಣಿಸಿ ಮರು ಪಾವತಿಗೆ ಮಂಜೂರಾತಿ ನೀಡುವುದು.

16) ಪ್ರತಿಯೊಬ್ಬ ನೌಕರನ ರೋಗ ಮತ್ತು ರೋಗದ ಚಿಕಿತ್ಸಾ ವಿಧಾನಗಳು ಬೇರೆ ಬೇರೆಯಾಗಿದ್ದು, ಚಿಕಿತ್ಸಾ ವೆಚ್ಚದ ಕ್ಲೇಮ್‌ನ ಗರಿಷ್ಟ ಮೊತ್ತದ ಮಿತಿಯನ್ನು ಕೆಎಂಎ ನಿಯಮಗಳಲ್ಲಿ ನಿಗದಿಪಡಿಸಿರುವುದಿಲ್ಲ, ಆದ್ದರಿಂದ ಪ್ರತಿಯೊಬ್ಬ ನೌಕರನು ಎಷ್ಟೇ ಮೊತ್ತದ ಕ್ಲೇಮ್ ಅನ್ನು ಮಾಡಿದಾಗಲೂ ಸಹ ನಿಯಮಗಳನ್ವಯ ಪರಿಶೀಲಿಸಿ ಸಂಬಂಧಿಸಿದ ನಿಯಂತ್ರಣಾಧಿಕಾರಿಯವರೇ (Controlling Officer) ಮರು ಪಾವತಿಗೆ ಮಂಜೂರಾತಿ ನೀಡುವ ಅಧಿಕಾರ ಹೊಂದಿರುತ್ತಾರೆ. ಈ ನಿಟ್ಟಿನಲ್ಲಿ ಸರ್ಕಾರವು ಸುತ್ತೋಲೆ ಸಂಖ್ಯೆ ಎಫ್‌ಡಿ 11 ಬಿಪಿಇ 2010 ದಿನಾಂಕ 06-07-2010 ರಲ್ಲಿ ರಾಜ್ಯದ ಎಲ್ಲಾ ಖಜಾನೆಗಳಿಗೆ ಸ್ಪಷ್ಟನೆಯನ್ನು ನೀಡಿರುತ್ತದೆ. ಸದರಿ ಸುತ್ತೋಲೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

17) ವೈದ್ಯಕೀಯ ವೆಚ್ಚದ ಮುಂಗಡಕ್ಕೆ (Advance) ಸಂಬಂಧಿಸಿದ ಪ್ರಸ್ತಾವನೆಗಳನ್ನು ಮಾತ್ರ ಮುಂದಿನ ಕ್ರಮಕ್ಕಾಗಿ ಪೂರಕ ದಾಖಲೆಗಳೊಂದಿಗೆ ಈ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

18) ನೌಕರರು ಪಡೆದ ಚಿಕಿತ್ಸೆಗೆ ಹಾಗೂ ಪ್ರತಿಯೊಂದು ಚಿಕಿತ್ಸಾ ವಿಧಾನಕ್ಕೆ ಸಂಬಂಧಿಸಿದಂತೆ ವೆಚ್ಚದ ಮರುಪಾವತಿಗಾಗಿ ಈ ಕೆಳಕಂಡ ದಾಖಲೆಗಳನ್ನು ನಿಗದಿತ ಅರ್ಜಿ ನಮೂನೆಗಳೊಂದಿಗೆ ಸಲ್ಲಿಸುವುದು:-

1. ಮರು ಪಾವತಿ ಕೋರಿಕೆಯನ್ನು ನೌಕರರ ಅವರ ಕಛೇರಿಯ / ಕಾಲೇಜಿನ ಮುಖ್ಯಸ್ಥರ ಮೂಲಕ ನಿಯಂತ್ರಣಾಧಿಕಾರಿಯವರಿಗೆ (Controlling Officer)ರವರಿಗೆ ಸಲ್ಲಿಸುವುದು.
2. ಚಿಕಿತ್ಸೆ ಪಡೆದ ಆಸ್ಪತ್ರೆಯು ಸರ್ಕಾರವು ಅಧಿಸೂಚಿಸಿರುವ ಆಸ್ಪತ್ರೆಗಳ ಪಟ್ಟಿಯಲ್ಲಿ ಇರುವ ಬಗ್ಗೆ ಸರ್ಕಾರದ ಆದೇಶದ ಪ್ರತಿಯನ್ನು ಸಲ್ಲಿಸುವುದು.
3. ಬಿಲ್ಲುಗಳನ್ನು ದ್ವಿಪ್ರತಿಯಲ್ಲಿ ಸಲ್ಲಿಸುವುದು.
4. ಬಿಲ್ಲಿನಲ್ಲಿ ಹೆಸರಿಸಿರುವ / ಚಿಕಿತ್ಸೆ ಪಡೆದ ವ್ಯಕ್ತಿಗೂ, ಈ ಮರು ಪಾವತಿ ಪಡೆಯಲು ಕೋರಿರುವ ಸರ್ಕಾರಿ ನೌಕರರಿಗೂ ಇರುವ ಸಂಬಂಧದ ಬಗ್ಗೆ ಅಧಿಕೃತ ದಾಖಲೆ ಪತ್ರ ಸಲ್ಲಿಸುವುದು.
5. ಯಾವುದೇ ವಿಮಾ ಕಂಪನಿಗಳಿಂದ ಅಥವಾ ಸರ್ಕಾರದ ಯಶಸ್ವಿನಿ ಯೋಜನೆಯಡಿ ವೈದ್ಯಕೀಯ ವೆಚ್ಚವನ್ನು ಭಾಗಶಃ ಅಥವಾ ಪೂರ್ತಿಯಾಗಿ ಭರಿಸಿರುವುದಿಲ್ಲ ಎಂಬ ಬಗ್ಗೆ ದೃಢೀಕರಣ / ಮುಚ್ಚಳಿಕೆ ಪತ್ರ ಸಲ್ಲಿಸುವುದು.
6. ಸರ್ಕಾರಿ ನೌಕರರ ತಂದೆ – ತಾಯಿಯವರ ಚಿಕಿತ್ಸಾ ವೆಚ್ಚವನ್ನು ಕ್ಲೇಮು ಮಾಡುವಾಗ ತಂದೆ – ತಾಯಿಯ ಮಾಸಿಕ ಆದಾಯದ ಅಧಿಕೃತ ದೃಢೀಕೃತ ಪತ್ರ / ಪ್ರಮಾಣ ಪತ್ರವನ್ನು ಸಲ್ಲಿಸುವುದು. ತಂದೆ – ತಾಯಿಯವರು ಯಾವುದೇ ಸರ್ಕಾರಿ / ಅರೆ ಸರ್ಕಾರಿ / ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿದ್ದು ಪ್ರಸ್ತುತ ಪಿಂಚಣಿದಾರರಾಗಿದ್ದಲ್ಲಿ ಅವರ ಪಿಂಚಣಿಗೆ ಸಂಬಂಧಿಸಿದ ದಾಖಲೆ ಪತ್ರವನ್ನು ಸಲ್ಲಿಸುವುದು. ಪಿಂಚಣಿದಾರರಲ್ಲದಿದ್ದಲ್ಲಿ, ಅವರ ಮಾಸಿಕ ಆದಾಯದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆಯುವ ಪ್ರಮಾಣ ಪತ್ರವನ್ನು ಸಲ್ಲಿಸುವುದು.
7. ನೌಕರರ ತಂದೆ ಅಥವಾ ತಾಯಿಯ ಚಿಕಿತ್ಸಾ ವೆಚ್ಚವನ್ನು ಕ್ಲೇಮು ಮಾಡುವಾಗ, ತಂದೆ – ತಾಯಿಯ ಕುಟುಂಬ ಸದಸ್ಯರ ವಿವರ, ಸದರಿ ಕುಟುಂಬ ಸದಸ್ಯರು ಅಂದರೆ ನೌಕರರ ಸಹೋದರ - ಸಹೋದರಿಯರು ಯಾವುದೇ ಸರ್ಕಾರಿ / ಅರೆ ಸರ್ಕಾರಿ / ಇತರೆ ಸಂಸ್ಥೆಗಳು / ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರುವುದಿಲ್ಲ ಮತ್ತು ನೌಕರರ ಹೊರತಾಗಿ ಅವರ ಸಹೋದರ-ಸಹೋದರಿಯರು ಈ ಚಿಕಿತ್ಸಾ ವೆಚ್ಚವನ್ನು ಭರಿಸಿರುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ / ದೃಢೀಕರಣ ಪತ್ರ ಸಲ್ಲಿಸುವುದು.
8. ನೌಕರರ ತಂದೆ – ತಾಯಿಯ ಚಿಕಿತ್ಸಾ ವೆಚ್ಚವನ್ನು ಕ್ಲೇಮು ಮಾಡುವಾಗ, ತಂದೆ ಅಥವಾ ತಾಯಿಯು ನೌಕರರ ಜೊತೆಯಲ್ಲಿ ವಾಸವಾಗಿರುವ ಬಗ್ಗೆ ಕುಟುಂಬ ಪಡಿತರ ಚೀಟಿ ಮುಂತಾದ ಅಧಿಕೃತ ದಾಖಲೆ ಪತ್ರದ ಪ್ರತಿ ಸಲ್ಲಿಸುವುದು ಮತ್ತು ಈ ಸಂಬಂಧ ಸೂಕ್ತ ಮುಚ್ಚಳಿಕೆ / ದೃಢೀಕರಣ ಪತ್ರ ಸಲ್ಲಿಸುವುದು.
9. ನೌಕರರ ಸ್ಪೌಸ್‌ನ (ಪತಿ ಯಾ ಪತ್ನಿ) ಚಿಕಿತ್ಸಾ ವೆಚ್ಚವನ್ನು ಕ್ಲೇಮು ಮಾಡುವಾಗ, ಅವರು ಅಧಿಕೃತ ಸ್ಪೌಸ್ (ಪತಿ ಯಾ ಪತ್ನಿ) ಎಂಬ ಬಗ್ಗೆ ಮತ್ತು ಸ್ಪೌಸ್ (ಪತಿ ಯಾ ಪತ್ನಿ)

ಬೇರೆ ಯಾವುದೇ ಉದ್ಯೋಗದಲ್ಲಿರದ ಬಗ್ಗೆ ಹಾಗೂ ಸದರಿ ವೆಚ್ಚವನ್ನು ಅವರ ಉದ್ಯೋಗದಾತರ / ವಿಮಾ ಕಂಪನಿಗಳಿಂದ / ಯಶಸ್ವಿನಿ ಯೋಜನೆಯಡಿ ಭರಿಸಿರುವುದಿಲ್ಲ ಎಂಬ ಬಗ್ಗೆ ಮುಚ್ಚಳಿಕೆ / ದೃಢೀಕರಣ ಪತ್ರ ಸಲ್ಲಿಸುವುದು.

10. ನೌಕರರ ಮಕ್ಕಳ ಚಿಕಿತ್ಸಾ ವೆಚ್ಚವನ್ನು ಕ್ಲೇಮು ಮಾಡುವಾಗ, ಮಕ್ಕಳ ಜನನ ಪ್ರಮಾಣ ಪತ್ರ, ಮಕ್ಕಳ ಈಗಿನ ಶಾಲಾ / ಕಾಲೇಜಿನ ಐಡೆಂಟಿಟಿ ಕಾರ್ಡ್ / ಅಂಕಪಟ್ಟಿಯ ಪ್ರತಿ ಸಲ್ಲಿಸುವುದು ಮತ್ತು ಮಕ್ಕಳು ಯಾವುದೇ ಉದ್ಯೋಗದಲ್ಲಿರದ ಬಗ್ಗೆ ಮುಚ್ಚಳಿಕೆ / ದೃಢೀಕರಣ ಪತ್ರ ಸಲ್ಲಿಸುವುದು.
11. ಬಿಲ್ಲುಗಳನ್ನು ಮತ್ತು ನಿಗದಿತ ಅರ್ಜಿ ನಮೂನೆಗಳನ್ನು ಸಂಬಂಧಿಸಿದ ಆಸ್ಪತ್ರೆಯ ಅಧಿಕೃತ ವೈದ್ಯಾಧಿಕಾರಿಗಳು / ಜಿಲ್ಲಾ ಶಸ್ತ್ರ ಚಿಕಿತ್ಸಕರು ದೃಢೀಕರಿಸಿರಬೇಕು.
12. ಒಳರೋಗಿಯಾಗಿ ದಾಖಲಾದ ಬಗೆಗೆ ಆಸ್ಪತ್ರೆಯ ಚೀಟಿ ಸಲ್ಲಿಸುವುದು.
13. ಆಸ್ಪತ್ರೆಯಿಂದ ಬಿಡುಗಡೆಯಾದಾಗ ಆಸ್ಪತ್ರೆಯವರು ನೀಡಿರುವ ಡಿಸ್‌ಚಾರ್ಜ್ ಸಮ್ಮರಿ ರಿಪೋರ್ಟ್ ಸಲ್ಲಿಸುವುದು.
14. ನೌಕರರ ವೇತನ ಪಟ್ಟಿ ಸಲ್ಲಿಸುವುದು.
15. ವೈದ್ಯಾಧಿಕಾರಿಗಳು, ಔಷದಿ ತೆಗೆದುಕೊಳ್ಳಲು ನೀಡಿರುವ ಸಲಹೆ ಚೀಟಿ ಸಲ್ಲಿಸುವುದು. (ಸದರಿ ಸಲಹೆ ಚೀಟಿಯಲ್ಲಿ ಎಷ್ಟು ಪ್ರಮಾಣದ, ಯಾವ ಯಾವ ಔಷದಿಗಳನ್ನು ಮತ್ತು ಯಾವ ಅವಧಿಯಲ್ಲಿ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಸಲಹೆ ಮಾಡಿರುವ ವಿವರ ಒಳಗೊಂಡಿರಬೇಕು)
16. ಪ್ರಯೋಗ ಶಾಲೆಯಲ್ಲಿ ನಡೆಸಿದ ಪರಿಶೀಲನಾ ವರದಿಗಳನ್ನು ಸಲ್ಲಿಸುವುದು.
17. ಡಿಸ್‌ಚಾರ್ಜ್ ಸಮ್ಮರಿ ರಿಪೋರ್ಟ್‌ನಲ್ಲಿ ಮತ್ತು ಮರು ಪಾವತಿ ಕ್ಲೇಮು ಮಾಡುವ ಫಾರಂ-ಬಿ ಮತ್ತು - ಸಿ ನಲ್ಲಿ ವೈದ್ಯಾಧಿಕಾರಿಗಳು ರೋಗಿಯ ರೋಗ ಲಕ್ಷಣ ಕುರಿತು ಸಂಪೂರ್ಣ ಮಾಹಿತಿ ನಮೂದಿಸಿರಬೇಕು.
18. ಶಸ್ತ್ರ ಚಿಕಿತ್ಸೆ ಆಗಿದ್ದಲ್ಲಿ ಶಸ್ತ್ರ ಚಿಕಿತ್ಸೆಯ ಸ್ವರೂಪ, ಮತ್ತು ಅದರ ಸಂಪೂರ್ಣ ವಿವರಗಳನ್ನು ಡಿಸ್‌ಚಾರ್ಜ್ ಸಮ್ಮರಿ ರಿಪೋರ್ಟ್‌ನಲ್ಲಿ ದಾಖಲಿಸಿರಬೇಕು.
19. ಅಂತಿಮವಾಗಿ ಆಸ್ಪತ್ರೆಯವರು ನೀಡಿರುವ ಬಿಲ್ಲಿನಲ್ಲಿ ರೋಗಕ್ಕೆ ಸಂಬಂಧಪಟ್ಟಂತೆ ನಡೆಸಿರುವ ತಪಾಸಣೆಗಳು, ನೀಡಿರುವ ಚಿಕಿತ್ಸೆಗಳು, ನೀಡಿರುವ ಔಷದಿಗಳು, ವಾರ್ಡ್ ಚಾರ್ಜ್, ವೈದ್ಯಾಧಿಕಾರಿಗಳ ಶುಲ್ಕ, ಮತ್ತಿತರ ಅಂಶಗಳನ್ನು ಒಳಗೊಂಡ ವಿವರಗಳಿರಬೇಕು. (Bill Detailing).

19) ನೌಕರರ ವೈದ್ಯಕೀಯ ವೆಚ್ಚ ಮರು ಪಾವತಿಗೆ ಮಂಜೂರಾತಿ ನೀಡುವ ಮುನ್ನ ಕೆಎಂಎ ನಿಯಮ 16 ರನ್ವಯ, ಸದರಿ ಕ್ಲೇಮುಗಳು ನಿಯಮಗಳಿಗೆ ಅನುಗುಣವಾಗಿ ಮರು ಪಾವತಿಗೆ ಅರ್ಹವಾಗಿರುವ ಬಗ್ಗೆ ದೃಢಪಡಿಸಿಕೊಂಡು, ನಿಯಮಬದ್ಧ ಹಾಗೂ ಕ್ರಮಬದ್ಧ ವೈದ್ಯಕೀಯ ವೆಚ್ಚಗಳಿಗೆ ಮಾತ್ರ ಮರು ಪಾವತಿಗೆ ಮಂಜೂರಾತಿ ನೀಡುವುದು. CGHS ಅಡಿಯಲ್ಲಿ ಕಾಲಕಾಲಕ್ಕೆ ವಿವಿಧ ರೋಗ ನಿರ್ಣಯ ವಿಧಾನಗಳಿಗೆ ಮತ್ತು ಚಿಕಿತ್ಸೆಗಳಿಗೆ ನಿಗದಿಪಡಿಸಿರುವ ದರಗಳಿಗಿಂತ ಹೆಚ್ಚಿನ ಮೊತ್ತವನ್ನು ಮಂಜೂರು ಮಾಡುವುದಾಗಲೀ ಅಥವಾ

ಅರ್ಹವಲ್ಲದ ಔಷದಿಗಳ ಮರು ಪಾವತಿಗೆ ಮಂಜೂರಾತಿ ನೀಡುವುದಾಗಲೀ ಅಥವಾ ನಿಯಮಾನುಸಾರ ಇಲ್ಲದ ಬಿಲ್ಲುಗಳನ್ನು ಮಾನ್ಯ ಮಾಡುವುದಾಗಲೀ ಮಾಡಬಾರದು.

20) ಜಿಲ್ಲಾ ಉಪನಿರ್ದೇಶಕರು ಮಂಜೂರುಮಾಡಿದ ವೈದ್ಯಕೀಯ ವೆಚ್ಚದ ವಿವರಗಳನ್ನು ಪ್ರತಿ ತಿಂಗಳೂ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿದೆ. ನಿರ್ದೇಶನಾಲಯವು ಈ ವಿವರಗಳನ್ನು ಹಾಗೂ ನಿರ್ದೇಶನಾಲಯದಲ್ಲಿ ಮಂಜೂರುಮಾಡಿದ ಮೊತ್ತವನ್ನು ಕ್ರೋಢೀಕರಿಸಿ ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳುವುದು.

21) ಯಾವುದೇ ಬಿಲ್ಲಿಗೆ ಸಂಬಂಧಿಸಿದಂತೆ ವೈದ್ಯಾಧಿಕಾರಿಯ ಪ್ರಿಸ್ಕ್ರಿಪ್ಷನ್, ಬಿಲ್ಲಿನಲ್ಲಿರುವ ಔಷಧಗಳು, ವಿವಿಧ ರೋಗ ನಿರ್ಣಯ ವಿಧಾನಗಳಿಗೆ ಮತ್ತು ಚಿಕಿತ್ಸೆಗಳಿಗೆ ನಿಗದಿಪಡಿಸಿರುವ ಮೊತ್ತ ಮತ್ತು ಒಟ್ಟಾರೆ ಬಿಲ್ಲಿನ ಮೌಲ್ಯವನ್ನು ನಿರ್ಧರಿಸುವಲ್ಲಿ ಸಂದೇಹ / ಸಂಶಯ ಉಂಟಾದಲ್ಲಿ ಉಲ್ಲೇಖ-4ರ ಸುತ್ತೋಲೆಯನ್ವಯ ಅಂತಹ ಬಿಲ್ಲುಗಳ ಬಗ್ಗೆ ಆಯಾ ಜಿಲ್ಲೆಯ ಜಿಲ್ಲಾ ಶಸ್ತ್ರ ಚಿಕಿತ್ಸಕರಿಂದ ಸದರಿ ಬಿಲ್ಲಿಗೆ ಸಂಬಂಧಿಸಿದಂತೆ ಮರು ಪಾವತಿಸಬಹುದಾದ ಅರ್ಹತಾ ಮೊತ್ತ ಎಷ್ಟು ಎಂಬ ಬಗ್ಗೆ ಅಭಿಪ್ರಾಯ ಪಡೆದು ಮರು ಪಾವತಿ ಬಗ್ಗೆ ಕ್ರಮ ಕೈಗೊಳ್ಳುವುದು.

22) ಮಾಹೆಯಾನ ವೈದ್ಯಕೀಯ ವೆಚ್ಚ ಮರುಪಾವತಿ ಪ್ರಕರಣಗಳ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಈ ಕಛೇರಿಯ ಲೆಕ್ಕಾಧಿಕಾರಿಗಳಿಗೆ ಸಲ್ಲಿಸುವುದು.

ಆಯುಕ್ತರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಇವರಿಗೆ:

ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ.

**ಪ್ರತಿಗಳನ್ನು ಮಾಹಿತಿಗಾಗಿ:-**

1. ಜಂಟಿ ನಿರ್ದೇಶಕರು, (ಆಡಳಿತ), ಜಂಟಿ ನಿರ್ದೇಶಕರು (ಪರೀಕ್ಷೆ), ಜಂಟಿ ನಿರ್ದೇಶಕರು (ಮೂಲಭೂತ ಸೌಲಭ್ಯ), ಜಂಟಿ ನಿರ್ದೇಶಕರು (ಶೈಕ್ಷಣಿಕ), ಜಂಟಿ ನಿರ್ದೇಶಕರು (ಮಾನ್ಯತೆ ಮತ್ತು ಅನುದಾನ), ಪಪೂಶಿಇ, ಬೆಂಗಳೂರು.
2. ಉಪ ನಿರ್ದೇಶಕರು (ಆಡಳಿತ), ಉಪ ನಿರ್ದೇಶಕರು (ಪರೀಕ್ಷೆ), ಉಪ ನಿರ್ದೇಶಕರು (ಮಾನ್ಯತೆ), ಇವರ ಆಪ್ತ ಶಾಖೆಗೆ.
3. ಲೆಕ್ಕಾಧಿಕಾರಿಗಳು / ಸಹಾಯಕ ನಿರ್ದೇಶಕರು (ಲೆಕ್ಕಪತ್ರ), ಪಪೂಶಿಇ, ಬೆಂಗಳೂರು.
4. ಸಹಾಯಕ ನಿರ್ದೇಶಕರು, ಇ-ಆಡಳಿತ, ಪಪೂಶಿಇ, ಬೆಂಗಳೂರು.
5. ಕಛೇರಿಯ ಎಲ್ಲಾ ಸಹಾಯಕ ನಿರ್ದೇಶಕರು, ಶಾಖಾಧಿಕಾರಿಗಳು, ಅಧೀಕ್ಷಕರು ಹಾಗೂ ವಿಷಯ ನಿರ್ವಾಹಕರಿಗೆ.
6. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಿನ್ಸಿಪಾಲರಿಗೆ.
7. ಹೆಚ್ಚುವರಿ ಪ್ರತಿ / ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಪದವಿ ಪೂರ್ವ ಶಿಕ್ಷಣ ಇಲಾಖೆ

ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ನೌಕರರ ವೈದ್ಯಕೀಯ ವೆಚ್ಚ ಮರುಪಾವತಿ ಮಾಡಿದ ಪ್ರಕರಣಗಳ ಮಾಹೆಯಾನ ತಃಖ್ತೆ

ಮಾಹೆ

ಜಿಲ್ಲೆ   ಜಿಲ್ಲೆಯ ಸಂಕೇತ

| ಕ್ರ ಸ | ನೌಕರರ ಹೆಸರು ಮತ್ತು ಪದನಾಮ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು / ಕಛೇರಿ ವಿಳಾಸ | ಚಿಕಿತ್ಸೆ ಪಡೆದವರು ನೌಕರರ ಕುಟುಂಬ ಸದಸ್ಯರಾಗಿದ್ದಲ್ಲಿ ಅವರ ಹೆಸರು ಮತ್ತು ನೌಕರರೊಂದಿಗಿನ ಸಂಬಂಧ | ಚಿಕಿತ್ಸೆ ಪಡೆದ ಆಸ್ಪತ್ರೆಯ ಹೆಸರು ಮತ್ತು ವಿಳಾಸ | ಚಿಕಿತ್ಸೆ ಪಡೆದ ಅವಧಿ (ಇಂದ-ಗೆ) | ಖಾಯಿಲೆಯ ವಿವರ | ವೈದ್ಯಕೀಯ ವೆಚ್ಚ ಮರು ಪಾವತಿ ಕೋರಿದ ಮೊತ್ತ | ತಿರಸ್ಕೃತ ಗೊಂಡ ಮೊತ್ತ | ಮಂಜೂರು ಮಾಡಿದ ಮೊತ್ತ | ಕಛೇರಿ ಆದೇಶ ಸಂಖ್ಯೆ ಮತ್ತು ದಿನಾಂಕ |
|---|---|---|---|---|---|---|---|---|---|---|
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |

ಸ್ಥಳ:

ದಿನಾಂಕ:

ಜಿಲ್ಲಾ ಉಪ ನಿರ್ದೇಶಕರ ಸಹಿ
ಮತ್ತು ಮೊಹರು